# ಎಂಜಿನಿಯರಿಂಗ್ ಶಿಕ್ಷಣ ಬ್ರ್ಯಾಂಚ್ ಆಯ್ಕೆ ಹೇಗೆ?



ಎಂಜಿನಿಯರಿಂಗ್ ಶಿಕ್ಷಣವು ಸವಾಲುಗಳನ್ನು ಎದುರಿಸಲು ನಿಮ್ಮನ್ನು ಸಜ್ಜುಗೊಳಿಸುತ್ತದೆ, ವಿಶ್ಲೇಷಣಾ ಕೌಶಲವನ್ನು ಚುರುಕುಗೊಳಿಸುತ್ತದೆ, ತಂಡ ಸ್ಫೂರ್ತಿಯನ್ನು ಪ್ರೇರೇಪಿಸುತ್ತದೆ.

■ ಡಾ. ಅಲಿ ಖ್ವಾಜಾ



ಭಾರತದಲ್ಲಿ ಎಂಜಿನಿಯರಿಂಗ್ ಶಿಕ್ಷಣವು ಬಿ.ಇ ಅಥವಾ ಬಿ.ಟೆಕ್ ಎಂದು ಕರೆಯಲಾಗುವ ಏಕರೂಪದ ನಾಲ್ಕು ವರ್ಷಗಳ ಅವಧಿಯ ಕೋರ್ಸ್. ಈ ಎರಡೂ ಕೋರ್ಸ್‌ಗಳ ನಡುವೆ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಆದರೆ ಈ ಮೊದಲು ಐಐಟಿ, ಎನ್‌ಐಟಿಗಳಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮಾತ್ರ ಇದ್ದ ಕಾರಣಕ್ಕೆ ಬಿ.ಟೆಕ್ ಕೋರ್ಸ್ ಅಧಿಕ ಮನ್ನಣೆ ಪಡೆದುಕೊಂಡಿದೆ ಅಷ್ಟೆ. ಹೀಗಾಗಿ ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಆದರೆ ಜೆಇಇ, ಸಿಇಟಿ ಅಥವಾ ಕಾಮೆಡ್‌ಗೆ ಅರ್ಹತೆ ಪಡೆದು ತಂತ್ರಜ್ಞಾನ ಕ್ಷೇತ್ರದಲ್ಲಿ ಭವಿಷ್ಯ ಕಂಡುಕೊಳ್ಳಲು ಬಯಸುತ್ತಿರುವವರು ಮಾತ್ರ ಎಂಜಿನಿಯರಿಂಗ್‌ನ ಯಾವ ಬ್ರ್ಯಾಂಚ್‌ಗೆ ಸೇರಿದರೆ ಸೂಕ್ತ ಎಂಬ ಮುಂದಿನ ಹಂತದ ನಿರ್ಧಾರ ಕೈಗೊಳ್ಳಲು ಮುಂದಾಗಬೇಕು.

ಹಲವರು ಇತರ ಸಾಧ್ಯತೆಗಳ ಬಗ್ಗೆ ಯೋಚನೆಯನ್ನೂ ಮಾಡದೆ ಕಣ್ಣುಮುಚ್ಚಿಕೊಂಡು ಕಂಪ್ಯೂಟರ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವು ವಿದ್ಯಾರ್ಥಿಗಳು ಎಲ್ಲಿ ಉತ್ತಮ 'ಕ್ಯಾಂಪಸ್ ಆಯ್ಕೆ'ಗೆ ಅವಕಾಶ ಇರುತ್ತದೋ ಅಂತಹ ಕಾಲೇಜನ್ನೇ ಆಯ್ದುಕೊಳ್ಳುತ್ತಾರೆ.

ಆದರೆ ಬ್ರ್ಯಾಂಚ್ ಆಯ್ಕೆಗೆ ಇವ್ಯಾವೂ ಸೂಕ್ತವಾದ ಕಾರಣಗಳಲ್ಲ. ಏಕೆಂದರೆ 'ಆದರ್ಶ' ಎನ್ನಬಹುದಾದ ಯಾವುದೇ ಬ್ರ್ಯಾಂಚ್ ಆಗಲಿ ಅಥವಾ 'ಅತ್ಯುತ್ತಮ' ಎನ್ನುವ ಕಾಲೇಜಾಗಲೀ ಇರುವುದಿಲ್ಲ.

ಕಂಪ್ಯೂಟರ್ ಸೈನ್ಸ್ ಪದವೀಧರರು ಇಂದಿಗೂ ಅಧಿಕ ಸಂಬಳ ತಂದುಕೊಡುವ ಉದ್ಯೋಗಗಳನ್ನು ಪಡೆಯುವವರಲ್ಲಿ ಮೊದಲಿಗರು ಎಂಬುದೇನೋ ನಿಜ. ಆದರೆ ಪ್ರತಿಷ್ಠಿತ ಸಂಸ್ಥೆಗಳಿಂದ ಉತ್ತಮ ಗ್ರೇಡ್ ಪಡೆದು ಹೊರಬಂದ ಇತರ ಬ್ರ್ಯಾಂಚ್‌ಗಳ ಎಂಜಿನಿಯರುಗಳನ್ನೂ ಐ.ಟಿ ಕಂಪೆನಿಗಳು ಕೆಲಸಕ್ಕೆ ಆಯ್ಕೆ ಮಾಡುವುದನ್ನು ನೀವು ಗಮನಿಸಬಹುದು. ಇದರ ಜೊತೆಗೆ, ಹೊಸದಾಗಿ ಪದವಿ ಪಡೆದವರ ಕನಿಷ್ಠ ದುಡಿಮೆಯ ಅವಧಿಯಾದ ಮುಂದಿನ 40– 50 ವರ್ಷಗಳಲ್ಲಿ ಐ.ಟಿ ಉದ್ಯಮದ ಭವಿಷ್ಯ ಹೇಗಿರುತ್ತದೆ ಎಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಈಗಾಗಲೇ ಐ.ಟಿ ಕಂಪೆನಿಗಳು ಮೊದಲಿನ ಆಕರ್ಷಣೆಯನ್ನು ಕಳೆದುಕೊಂಡಿವೆ ಮತ್ತು ಅಲ್ಲಿ ನೇಮಕಾತಿ ಪ್ರಮಾಣ ಕುಸಿದಿರುವುದು ಗೋಚರಿಸುತ್ತಿದೆ.

'ಕ್ಯಾಂಪಸ್ ನೇಮಕಾತಿ'ಗಾಗಿ ತಮ್ಮ ಬಳಿ ಬರುತ್ತವೆ ಎಂದು ಕಾಲೇಜುಗಳು ಜಾಹೀರಾತು ಕೊಟ್ಟುಕೊಳ್ಳುವ 'ಪ್ರತಿಷ್ಠಿತ' ಕಂಪೆನಿಗಳು ಉತ್ಕೃಷ್ಟವಾದವೇ ಆಗಿರುತ್ತವೆ ಎಂದೇನಿಲ್ಲ. ಅವು ಒಳ್ಳೆಯ ಉದ್ಯೋಗವನ್ನೇ ನೀಡುತ್ತವೆ ಎಂದೂ ಹೇಳಲಾಗದು. ಈ ಉದ್ಯೋಗ ಅವುಗಳ ಕಾಲ್ ಸೆಂಟರ್‌ಗಳಲ್ಲಿ ಆಗಿರಬಹುದು ಅಥವಾ ಒಬ್ಬ ಅಭ್ಯರ್ಥಿ ಪಡೆದಿರುವ ಕಠಿಣ ತರಬೇತಿಯ ಮಟ್ಟಕ್ಕೆ ಸಾಟಿಯಾಗಲಾರದ ಸಾಧಾರಣ ದರ್ಜೆಯ ಉದ್ಯೋಗ ಆಗಿರಬಹುದು.

ಕೆಲವೊಮ್ಮೆ ಎಂಜಿನಿಯರಿಂಗ್ ಆಕಾಂಕ್ಷಿಗಳು ಗೊಂದಲದ ಸ್ಥಿತಿಯನ್ನೂ ಎದುರಿಸುತ್ತಾರೆ. 'ಎಂಜಿನಿಯರಿಂಗ್‌ನಲ್ಲಿ ಯಾವ ವಿಷಯ ಆಯ್ಕೆ ಮಾಡಿಕೊಳ್ಳಲು ಬಯಸಿದ್ದೀಯಾ' ಎಂದು ಕಂಪ್ಯೂಟರ್ ಗೇಮ್ ಆಡುವುದರಲ್ಲಿ